
ಮುಗಿಸಿ ಬಂದವರು ತಮ್ಮ ಮನೆಗಳಿಗೆ ಹೋಗದೆ ಸೀದಾ ಹೋಟೆಲ್‌ಗೆ ಬರುತ್ತಿದ್ದರು. ಬಂದವರೇ ಮೊದಲು ಒಂದು ಕಪ್ ಟೀ ಜೊತೆಗೆ ಮಂಡಕ್ಕಿ-ಮೆಣಸಿನಕಾಯಿಗೆ ಆರ್ಡರ್ ಮಾಡುತ್ತಿದ್ದರು. ಸೌದೆ ತಂದವರು ಒಂದು ಹೊರೆ ಸೌದೆಗೆ ಬದಲಾಗಿ ಮಂಡಕ್ಕಿ- ಮೆಣಸಿನಕಾಯಿ ಮತ್ತು ಒಂದು ಲೋಟ ಟೀಗೆ ಬರುವ ದುಡ್ಡನ್ನು ವಜಾ ಹಾಕುತ್ತಿದ್ದರು. ಕೊನೆಗೆ ಒಂದು ಬೀಡಿಕಟ್ಟು ಮತ್ತು ಬೆಂಕಿಪೊಟ್ಟಣ ಕೊಳ್ಳುವುದನ್ನು ಮಾತ್ರ ಮರೆಯುತ್ತಿರಲಿಲ್ಲ! ಇನ್ನೂ ಕೆಲವರು ತೆಂಗಿನಕಾಯಿಯನ್ನು ಕೊಟ್ಟು ಸಾಲದ ಶಿಲ್ಕಿಗೆ ಉತಾರ ಹಾಕುತ್ತಿದ್ದರು. ಏನೂ ಇಲ್ಲದವರು ಲೆಕ್ಕ ಹೇಳಿ ಹೋಗುತ್ತಿದ್ದರು. ಮುಂದಿನ ಸಲ ಯಾವುದಾದರೂ ದವಸಕ್ಕೊ ಅಥವಾ ಸೌದೆ ಕಟ್ಟಿಗೊ ಸಾಲ ಚುಕ್ತಾ ಮಾಡುತ್ತಿದ್ದರು. ನರಸಿಂಹಪ್ಪ ಈ ಎಲ್ಲ ಲೆಕ್ಕಗಳನ್ನು ಬರೆದಿಡುವಂಥ ಅಕ್ಷರಸ್ಥನಾಗಿರಲಿಲ್ಲ!.

ಆದರೂ ಯಾರು ಎಷ್ಟು ಕೊಡಬೇಕು ಎಂಬುದನ್ನು ಚಾಚೂತಪ್ಪದೇ ಹೇಳುತ್ತಿದ್ದ. ಅವನು ಹೇಳಿದ ಲೆಕ್ಕಕ್ಕೆ ಯಾರೂ ಮರು ನುಡಿಯುತ್ತಿರಲಿಲ್ಲ! ಅವರೆಲ್ಲರಿಗೂ ಅಂಗಡಿ ನರಸಿಂಹಪ್ಪನ ಮಾತಿನ ಬಗ್ಗೆ ನಂಬಿಕೆಯಿತ್ತು. ಇನ್ನೊಬ್ಬರನ್ನು ಅಸಂತೋಷ ಪಡಿಸುವ ಗುಣಗಳೇ ಊರಿನವರಲ್ಲಿ ಇರಲಿಲ್ಲ. ಮತ್ತೊಬ್ಬರನ್ನು ಯಾವ ರೀತಿಯಲ್ಲೂ ನೋಯಿಸದ ಗುಣ ಯಾರಲ್ಲಿರುತ್ತದೋ ಅವರು ಸಹಜವಾಗಿಯೇ ಬದುಕಿನಿಂದ ಬರುವ ಸಂತೋಷವನ್ನು ತೆರೆದ ಮನಸ್ಸಿನಿಂದ ಆನಂದಿಸುತ್ತಾರೆ. ಈ ವಿನಿಮಯದ ವ್ಯಾಪಾರ ಗುಡಿಹಳ್ಳಿಯಲ್ಲಿ ಬಹಳ ವರ್ಷಕಾಲ ನಡೆಯಿತು. ಅವರಿಗೆ ಹಣ ಎಂಬುದೇ ಅಪರಿಚಿತ ವಸ್ತುವಾಗಿತ್ತು. ನಮ್ಮ ಹಳ್ಳಿಯಲ್ಲಿ ಹಣವನ್ನು ನೋಡಿದ್ದ ಒಂದೇ ಒಂದು ಕುಟುಂಬವೆಂದರೆ, ಅದು ಸಾತೆಮ್ಮನ ಕುಟುಂಬ. ಇಂಥ ಗುಣದಿಂದಾಗಿಯೇ ಗುಡಿಹಳ್ಳಿಯ ಜನರು ಬಡತನದ ಬದುಕಿನಲ್ಲೂ ದೀರ್ಘಾಯುಷಿಗಳಾಗಿದ್ದಾರೆ. ನಾನು ನೋಡಿದಂತೆ ಗುಡಿಹಳ್ಳಿಯಲ್ಲಿ 85 ವರ್ಷ, 90 ವರ್ಷ ದಾಟಿದ ಹಿರೀಕರ ಸಂಖ್ಯೆ ಎಲ್ಲ ಹಳ್ಳಿಗಳಲ್ಲಿರುವುದಕ್ಕಿಂತ ಹೆಚ್ಚಾಗಿದೆ. ಗೌರವ, ಘನತೆಗಳ ಸ್ಥಾನಮಾನಗಳು ಅತ್ಯಂತ ಗುಣವಂತರಿಗೆ ಹಾಗೂ ಸಜ್ಜನರಿಗೆ ಹೋಗಬೇಕೆನ್ನುವುದಾದರೆ, ಗುಡಿಹಳ್ಳಿಯ ನಾಗರಿಕರಿಗೆ ಆ ಸ್ಥಾನಮಾನಗಳು ಮೊದಲು ಸಲ್ಲಬೇಕು.



ಬಡಬಗ್ಗರನ್ನು ನಿರಂತರವಾಗಿ ಸಲಹುವ ಅನ್ನದ ದೇವತೆಯೊಬ್ಬಳು ಗುಡಿಹಳ್ಳಿಯಲ್ಲಿದ್ದಳು. ಊರಿನಲ್ಲಿ ಎಲ್ಲರೂ ಅವಳನ್ನು 'ಸಾತೆಮ್ಮ' ಎಂದೇ ಕರೆಯುತ್ತಿದ್ದರು. ಅದು ಅವಳ ಹುಟ್ಟು ಹೆಸರೋ ಅಥವಾ ಜನ ಕೊಟ್ಟ ಹೆಸರೋ ತಿಳಿಯದು! ಅಲ್ಲಿನ ಜನ ಮಾತ್ರ ಅವಳನ್ನು 'ಸಾತೆಮ್ಮ' ಎಂದೇ ಕರೆಯುತ್ತಿದ್ದರು. ಕೊರಳಲ್ಲಿ ಎದ್ದು ಕಾಣುವಂಥ ಕಾಸಿನ ಸರ, ಎರಡೂ ಕೈಗೆ ಬೆಳ್ಳಿ ಕಡಗ, ಬಳೇಕಾಯಲ್ಲಿ ಸದಾ ಕಾಣುತ್ತಿದ್ದ ಬುಡ್ಡಿಚೀಲ, ಕಾಲಿಗೆ ಕಡಗ, ಬೆನಕಲ್ಲು ಸೀರೆ ಉಟ್ಟು, ಕೈಯಲ್ಲೊಂದು ಸದಾ ಕೊಡೆ ಹಿಡಿದಿರುತ್ತಿತ್ತು. ಗುಡಿಹಳ್ಳಿಯ ಆರಂಭದಲ್ಲೇ ಅವರ ಜಮೀನು. ಆ ಜಮೀನಿನ ತುಂಬೆಲ್ಲ ರಾಗಿ, ಭತ್ತದ ಫಸಲು ತುಳುಕುತ್ತಿತ್ತು. ನಮ್ಮ ಊರಿನವರು ಹೋಗುತ್ತಾ ಬರುತ್ತಾ ಎದೆಮಟ್ಟ ಬೆಳೆದು ನಿಂತಿದ್ದ ಬೆಳೆಯನ್ನು ನೋಡಿ, ಅದು ನಾವು ಬೆಳೆದ ಬೆಳೆಯೇನೋ ಎಂಬಂತೆ ಹಿಗ್ಗುತ್ತಿದ್ದರು. ಏಕೆಂದರೆ, ರಾಗಿ ಮತ್ತು ಭತ್ತದ ಬೆಳೆಯಲ್ಲಿ ನಮ್ಮ ಮನೆಗೂ ಪಾಲು ಬರುತ್ತದೆ ಎಂಬುದು ಅವರಿಗೆ ತಿಳಿದಿತ್ತು. ಸುಗ್ಗಿ ಸಮಯದಲ್ಲಿ ಸಾತೆಮ್ಮನ ಹೊಲದ ಕಣದಲ್ಲಿ ಆಳೆತ್ತರದ ರಾಗಿಯ ಎರಡು ರಾಶಿ ಮತ್ತು ಎರಡು ಭತ್ತದ ರಾಶಿಗಳನ್ನು ಗುಡ್ಡದಂತೆ ಹಾಕುತ್ತಿದ್ದರು. ರಾಶಿಗೆ ತಂಗಟೆ ಹೂವು ಮತ್ತು ಕಣಿಗಲೆ ಹೂವುಗಳನ್ನು ಇಟ್ಟು ಕಾಯಿ ಒಡೆದು ಪೂಜಿಸುತ್ತಿದ್ದರು. ಸಾತೆಮ್ಮನೇ ಅನ್ನದ ಬುತ್ತಿ ಮಾಡಿ,